Sri KONDAJJI BASAPPA.—It is not correct, Sir. Only preliminary investigations had been made.

ಶ್ರೀಮತಿ ರತ್ನಮ್ಮ ಮಾಧವರಾವ್. — ಭದ್ರಾವತಿ, ಶಿವಮೊಗ್ಗ ರಸ್ತೆ ಈ ಸೇತುವೆ ಮೇಲೆ ಇದೆ. ಅದು ನ್ಯಾಷನಲ್ ಹೈವೇ ರಸ್ತೆ ಆಗಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಇಲ್ಲ, ಇನ್ನೂ ಅದು ಸ್ಪೇಷ್‌ಫಂಡ್ ರಸ್ತೆಯೇ ಆಗಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಅದು ಬಹಳ ಮುಖ್ಯವಾದ ರಸ್ತೆ, ನ್ಯಾಷನಲ್ ಹೈವೇ ಮಾಡುವುದರಿಂದ ಆರ್ಥಿಕ ಅನುಕೂಲ ಸೆಂಟರ್ ನಿಂದ ದೊರಕುತ್ತದೆಯಲ್ಲವೇ ?

Sri KONDAJJI BASAPPA.—It is a useful suggestion made by the Hon'ble Member. It is a suggestion for action by the Government.

ಶ್ರೀಮತಿ ರತ್ನಮ್ಮ ಮಾಧವರಾವ್—ಎಸ್ಟಿಮೇಟು, ಪ್ಲಾನ್ ಆಗಿ ಹಣ ದೊರಕುವ ವೇಳೆಗೆ ಅನುಕೂಲವಾಗಲು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆದರೂ ಕೊಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಸ್ಪೇಷ್‌ನಲ್ಲಿರುವುದರಿಂದ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಈ ವಿಷಯದಲ್ಲಿ ಮುನಿಸಿಪಾಲಟಿಯವರಿಂದ ಮನವಿ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಮಾನ್ಯ ಸದಸ್ಯರಿಂದಲೂ ಕೂಡ ಮನವಿ ಬಂದಿದೆ ; ಅನೇಕ ಜನ ಸಾರ್ವಜನಿಕರೂ ಕೂಡ ಮನವಿಮಾಡಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈಗಿನ ಇಂಜಿನಿಯರು ಇನ್ನೂ ಭದ್ರವಾಗಿದೆ. ಪರವಾಗಿಲ್ಲ, ಎಂದು ರಿಪೋರ್ಟ್ ಮಾಡಿದ್ದಾರೆಂದು ಉತ್ತರ ಕೊಟ್ಟಿರಿ. 100 ವರ್ಷದ ಹಿಂದೆ ಕಟ್ಟಿದ ಆ ಇಂಜಿನಿಯರು ಎಷ್ಟು ವರ್ಷದಲ್ಲಿ ಪುನಃ ಈ ಬ್ರಿಜ್ ಕಟ್ಟಬೇಕು ಅಥವಾ ಇದಕ್ಕೆ ಎಷ್ಟುವಯಸ್ಸಿದೆ ಎಂದು ರಿಪೋರ್ಟ್ ಇಟ್ಟು ಹೋಗಿದ್ದಾರೆಯೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾವಾಗಲೂ ನಾವು ಸಾಮಾನ್ಯವಾಗಿ ಟೆಕ್ನಿಕಲ್ ಒಪಿನಿಯನ್ ಮೇಲೆ ಹೋಗುತ್ತೇವೆ. ಚೀಫ್ ಇಂಜಿನಿಯರು ರಿಪೋರ್ಟ್ ಮಾಡಿದ್ದಾರೆ. 100 ವರ್ಷ ಆದರೂ ಕೂಡ ಭದ್ರವಾಗಿದೆ ಟ್ರಾಫಿಕ್ ನಡೆಸಬಹುದು ಎಂದು ಹೇಳಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನನ್ನ ಪ್ರಶ್ನೆ ಇದನ್ನು ಕಟ್ಟಿದ ಇಂಜಿನಿಯರು ಎಷ್ಟುವರ್ಷ ವಯಸ್ಸು ಎಂದು ನಿರ್ಧರಿಸಿದ್ದಾರೆ ಎಂದು ?

ಶ್ರೀ ಕೊಂಡಜ್ಜಿ ಬಸಪ್ಪ.—ವಯಸ್ಸು ಮುಖ್ಯವಲ್ಲ. ಅದರಲ್ಲಿ ಟೆಕ್ನಿಕಲ್ ಒಪಿನಿಯನ್ ಬರೆದಿರುತ್ತಾರೆ ; ಅದು ಮುಖ್ಯ.

Expansion of the Research Station at Krishnarajasagar.

*Q.—817. Sri G. V. GOWDA (Palya).—Will the Government be pleased to state.—

(*a*) whether there is any proposal before them to expand the Research Station at Krishnarajsaagar, by upgrading it and by providing adequate number of staff;

(*b*) if so, the action taken by them in this behalf ?

*A.—Sri KONDAJJI BASAPPA (Deputy Minister for Co-operation) [on behelf of SRI VEERENDRA PATIL (Minister for Public Works)].—

(*a*) Yes.

(*b*) The proposals are under active consideration of Government.

Sri G. V. GOWDA.—Since what time is this proposal to upgrade the station pending with Government ?

†Sri KONDAJI BASAPPA.—From 1961.

Sri G. V. GOWDA.—Is it not a fact that the Resources and Economy Committee has thrown out a strong recommendation that this station must be upgraded ?

Sri KONDAJJI BASAPPA.—We have also accepted the proposal made by the Standing Committee ?

Sri K. S. SURYANARAYANA RAO.—What are the proposals for expansion ?

Sri KONDAJJI BASAPPA.—They have proposed in their memorandum that there should be 1 Director, 2 Research Officers, 8 Assistant Research Officers, 32 Junior Engineer Officers, 1 Chemical Examiner, 1 Mathematical Statistician, 43 Research Assistants and Class III and Class IV officers. They have also proposed several branches in which research should take place such as hydraulic branch, model prototype studies, technical survey, irrigation research branch, mechanical branch, materials testing branch, research field staff, etc.

Sri G. DUGGAPPA.—What is the estimated cost ?

Sri KONDAJJI BASAPPA.—For staffing alone they have estimated Rs. 40,000 a month.

Sri S. SIVAPPA.—Is it not a fact that the present works of the P. W. D. are carried on without any research ?

Sri KONDAJJI BASAPPA.—There rae research assistants and they are conducting research at K. R. Sagar.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಯೋಜನೆಗೆ ಎಷ್ಟು ಖರ್ಚಾಗುವುದು ? ಇದನ್ನು ಸರ್ಕಾರ ಎಷ್ಟು ದಿವಸಗಳಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ತೀರ್ಮಾನಕ್ಕೆ ಬಂದಿದೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ನದ್ಯಕ್ಕೆ ಒಬ್ಬ ಡೈರೆಕ್ಟರನ್ನು ನೇಮಿಸಿದ್ದಾರೆ. ಈಗ ಎಗ್ಜಿಕ್ಯುಟಿವ್ ಇಂಜಿನಿಯರು ಆ ಛಾರ್ಜಿನಲ್ಲಿದ್ದಾರೆ. ಸೂಪರಿಂಟೆಂಡಿಂಗ್ ಇಂಜಿನಿಯರ ಗ್ರೇಡಿನ ಡೈರೆಕ್ಟರಿರ ಬೇಕೆಂದು ಈಗ ಗೊತ್ತುಮಾಡಿದ್ದಾರೆ. ರಾಮಚಂದ್ರ ರಾಯರ ಸಮಿತಿ ವರದಿಯ ಬಗ್ಗೆ ಸರ್ಕಾರ ತೀರ್ಮಾನ ಕೈಕೊಂಡ ನಂತರ ಮುಂದಿನ ವಿಚಾರ ಆರೋಚಿಸ ಬೇಕೆಂದಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ತೀರ್ಮಾನ ತೆಗೆದು ಕೊಂಡು ಎಷ್ಟು ದಿವಸಗಳಲ್ಲಿ ಇಂಪ್ಲಿಮೆಂಟ್ ಮಾಡುತ್ತೀರಿ ?

Before the end of the budget year or are you going to consider this matter after the year is over ?

Sri KONDAJJI BASAPPA.—Action is being taken.

Sri S. SIVAPPA.—Will this research be under the University of Mysore or under the direct control of Government. ?

Sri KONDAJJI BASAPPA.—At present it is under the control of the Chief Engineer, but in the proposal it is to be made an independent body directly under the control of Government.

Sri H. R. KESHAVA MURTHY.—May I know one or two important researches carried on by this station ?

Sri KONDAJJI BASAPPA.—Designs, Design buildings, irrigation works, etc.

Sri G. V. GOWDA.—Are Government convinced of the need to upgrade this station and make it an independent station as in Madras and elsewhere ?

Sri KONDAJJI BASAPPA.—They are interested in making it an independent body, but they have not taken a decision so far. A partial step has been taken to upgrade the station. The Executive Engineer is to be upgraded to Superintending Engineer and made the Director.

Sri ANNA RAO GANAMUKHI.—What are the advances made in the various fields of research here ?

Sri KONDAJJI BASAPPA.—I want notice.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಒಂದು ಡೈರೆಕ್ಟೆರೇಟ್ ಕ್ರಿಯೇಟ್ ಮಾಡುವುದಾಗಿ ಹೇಳಿದರು. ಅದನ್ನು ಮದ್ರಾಸಿನಲ್ಲಿ ಯಾವ ರೀತಿ ನೀತಿ ಅನುಸರಿಸಿದ್ದಾರೆ ಅದರ ಆಧಾರದ ಮೇಲೆ ಕೋಡುತ್ತಾರೋ ಅಥವಾ ಮೈಸೂರು ಸರ್ಕಾರದವರೇ ಸ್ವತಃ ತಮ್ಮದೇ ಒಂದು ರೀತಿಯಲ್ಲಿ ಮಾಡುತ್ತಾರೋ ?

ಶ್ರೀ ಕೊಂಡಜ್ಜಿ ಬಸಪ್ಪ.—ಮೈಸೂರು ಸರ್ಕಾರದ ಕೆಲವು ನಿವೃತ್ತರಾದ ಚೀಫ್ ಇಂಜಿನಿಯರುಗಳು ಮತ್ತು ಅಧಿಕಾರದಲ್ಲಿರವ ಕೆಲವು ಚೀಫ್ ಇಂಜಿನಿಯರುಗಳು ಇವರಲ್ಲಿ 5 ಜನರ ಒಂದು ಸಮಿತಿಯನ್ನು ರಚಿಸಿದೆ. ಆ ಸಮಿತಿಯು ಮದ್ರಾಸ್ ಪ್ಯಾಟ್ಟನ್ ಮತ್ತು ಇತರ ಕಡೆಗಳಲ್ಲಿರುವ ಸಂಶೋಧನಾ ಕೇಂದ್ರುಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಒಂದು ಮೆಮೊರ್ಯಾಂಡಂ ಸಲ್ಲಿಸಿದೆ. ಅದನ್ನು ಸರ್ಕಾರ ವಿಚಾರ ಮಾಡುತ್ತಿದೆ.

———

Construction of a Building for Primary Health Unit at Mallappanahally in Hosadurga Taluk.

*Q.—250. **Sri G. T. RANGAPPA** (Hosadurga).—

Will the Government be pleased to state :—

(*a*) whether tenders have been called for the construction of the building for the Primary Health Unit at Mallappanahally in Hosadurga Taluk ;

(*b*) whether the tenders so called have been accepted ;

(*c*) whether any stay has been issued by the Government restraining the construction of buildings and if so when and why ?

A—**Sri K. NAGAPPA ALVA** (Minister for Health).—

(*a*) Yes.

(*b*) Yes.

(*c*) Yes. In April 1962, since the claims of Hosadurga Town for shifting the headquarters of the Primary Health Unit ordered to be located at Mallapanahally is being examined.

ಶ್ರೀ ಜಿ. ಟಿ. ರಂಗಪ್ಪ.—ಹಿಂದೆ ಹೊಸದುರ್ಗಕ್ಕೆ ಆರೋಗ್ಯ ಕೇಂದ್ರವನ್ನು ಬದಲಾಯಿಸ ಬೇಕೆಂದು ಹೊಸ ದುರ್ಗ ಮುನಿಸಿಪಾಲಿಟಿಯವರು ಕೇಳಿದಾಗ ಹಾಗೆ ಬದಲಾಯಿಸುವುದಕ್ಕಾಗುವುದಿಲ್ಲ ಎಂದು ಸರ್ಕಾರ ಜವಾಬು ಕೊಟ್ಟಿರುವುದು ನಿಜವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ವಿ. ಗೌಡ.—ಜೆಂಡರು ಕರೆದು, ಅದು ಬಂದ ಮೇಲೆ ಅಂಗೀಕರಿಸಿ ಎಲ್ಲಾ ಆದಮೇಲೆ ಮೊದಲು ಗೊತ್ತು ಮಾಡಿದ್ದ ಸ್ಥಳವನ್ನು ಬದಲಾಯಿಸಲು ಕಾರಣವೇನು ?